ಹುಟ್ಟಿಸುವಂತೆಯೇ ಭಯವನ್ನು ಮೀರುವ ನೆಲೆಗಳನ್ನೂ ವ್ಯಾಸರ ಕಥಾಪಾತ್ರಗಳು ಹೇಳುತ್ತವೆ. ಏಕಪ್ರಕಾರವಾದ ನೇರ ಬರವಣಿಗೆಗೂ ಪರೋಕ್ಷ ಸಂಬಂಧದ ಕಥನಕ್ಕೂ ವ್ಯತ್ಯಾಸವಿದೆ. ವ್ಯಾಸರದ್ದು ಪರೋಕ್ಷ ಸಂಬಂಧದ ಕಥನ.

**4**

ನಮ್ಮನ್ನು ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ ಎಂಬ ಭ್ರಮೆ ನಮಗಿರುತ್ತದೆ. ನನಗೆ ಗೊತ್ತಾಗದೇ ಇರುವ 'ನಾನು' ತುಂಬಾ ಇದೆ. ನಮ್ಮ ಪಕ್ಕದಲ್ಲಿ ಓಡಾಡುವವರನ್ನು ನಾವೆಷ್ಟೋ ತಿಳಿದಿದ್ದೇವೆ ಎಂದು ಭಾವಿಸಿದರೂ ನಿಜವಾಗಿ ಅವರ ಬಗ್ಗೆ ನಾವು ಒಂದು ರೇಖೆಯಷ್ಟೂ ತಿಳಿದಿರುವುದಿಲ್ಲ. ಮನುಷ್ಯ ಮನುಷ್ಯನಿಗೆ ನಿಗೂಢವಾಗಿಯೇ ಇರುತ್ತಾನೆ. ಮನುಷ್ಯನ ಈ 'ಸುಪ್ತ'ದ ಬಗ್ಗೆ ಯೋಚಿಸುವಾಗಲೇ ಅದರ ವಿರುದ್ಧವಿರುವ 'ಜಾಗೃತಿ'ಯನ್ನೂ ವ್ಯಾಸರು ತೋರಿಸುತ್ತಾರೆ. ಈ ವಿಸಂಗತಿಗಳನ್ನು ಹೆಣೆಯುವ ಕ್ರಮ ಕನ್ನಡದ ಕತೆಗಾರರಲ್ಲಿ ವ್ಯಾಸರದ್ದು ವಿಶಿಷ್ಟ.

ವ್ಯಾಸರ ಕತೆಗಳು ಕೆಲವೊಮ್ಮೆ ಮನೋವಿಶ್ಲೇಷಣಾತ್ಮಕ ಅನ್ನಿಸಬಹುದು. ಮನುಷ್ಯನ ಆದಿಮ ವಾಸನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಶೋಧಿಸಿದ ಹಾಗೆ ಕಾಣಬಹುದು. ಅವರ ಪ್ರಕಾರ ಎಲ್ಲ ಕಾಲದಲ್ಲೂ ಮನುಷ್ಯ ತಳಮಳಗಳಲ್ಲೇ ಬದುಕುತ್ತಾನೆ. ನೆಮ್ಮದಿಯಲ್ಲೂ ವಿಷಾದ ತಬ್ಬಿಕೊಂಡಿರುತ್ತದೆ. ಸುಖದೊಂದಿಗೆ ದುಃಖವಿದೆ. ದುಃಖದೊಂದಿಗೆ ಸುಖವೂ ಇದೆ. ನೆಮ್ಮದಿ ನೆಮ್ಮದಿಯಲ್ಲ. ದುಃಖ ದುಃಖವಲ್ಲ. ಸಾವು ಸಾವಲ್ಲ, ಬದುಕು ಬದುಕಲ್ಲ. ಎಲ್ಲವೂ ಒಂದಕ್ಕೊಂದು ಮಿಳಿತಗೊಂಡಿರುವ ಒಂದು ಸೆನ್ಸ್. ಆ ಸೆನ್ಸ್ ಅನ್ನು ಕುರಿತ ಜಿಜ್ಞಾಸೆಯನ್ನು ವ್ಯಾಸರ ಕತೆಗಳು ಮಾಡುತ್ತವೆ.

ನಾವು ಬದುಕೊಂದು ಹೋರಾಟ ಎನ್ನುತ್ತೇವೆ. ಒಬ್ಬ ರೈತ, ಒಬ್ಬ ವಿಜ್ಞಾನಿ, ಒಬ್ಬ ಲೇಖಕ ಎಲ್ಲರೂ ಬದುಕಿನ ಹೋರಾಟದಲ್ಲಿ ಇರುವವರು. ನಾವು ಸುಮ್ಮನೇ ಹೋರಾಟ ಎನ್ನುತ್ತೇವೆ. ವ್ಯಾಸರು ಆ ಹೋರಾಟವು ಬದುಕಿಗೆ ಹೇಗೆ ಸಂಬಂಧಿಸಿದೆ ಎನ್ನುವುದನ್ನು ಆಲೋಚಿಸುತ್ತಾರೆ. ಹಾಗೆ ಆಲೋಚನೆ ಮಾಡುವ ಮನಸ್ಸಿನ ಕ್ಷಣಗಳನ್ನು ಹಿಡಿಯುವುದಕ್ಕೆ ಪ್ರಯತ್ನಿಸುತ್ತಾರೆ. ಆ ಕ್ಷಣ ಎನ್ನುವುದು ಕೆಲವು ಸೆಕುಂಡುಗಳಾಗಿರಬಹುದು, ನಿಮಿಷಗಳಾಗಿರಬಹುದು, ಗಂಟೆಯೋ ದಿನಗಳೋ ಆಗಬಹುದು. ವ್ಯಾಸರದ್ದೊಂದು ಮಾತಿದೆ: 'ನನ್ನೆದುರು ಮಹಾ ಸಮುದ್ರ ಇದೆ. ನನ್ನ ಸಮುದ್ರವನ್ನು ನಾನು ಕೆರೆಯನ್ನಾಗಿ ಮಾಡಬೇಕು.' ಇದೊಂದು ರೂಪಕ. ಬದುಕಿನ ಹೋರಾಟವೇ ಸಮುದ್ರ. ಅದರ ಅಲೆಗಳನ್ನು ನಾವು ಎದುರಿಸಬೇಕಷ್ಟೆ. ಸಂವೇದನೆಗೆ ಒಳಪಡಿಸಲಾಗದ ಜಗತ್ತು ಒಂದಿದೆ. ಅದನ್ನು ಸಂವೇದನೆಗೆ ಒಳಪಡಿಸಿಕೊಳ್ಳುವುದು ಹೇಗೆ ಎಂಬ ಜಿಜ್ಞಾಸೆ. ಈ ತಾತ್ವಿಕತೆಯನ್ನು ಕನ್ನಡ ಸಾಹಿತ್ಯ ಹಿಂದಿನಿಂದಲೂ ಇಟ್ಟುಕೊಂಡಿದೆ. ಇದು ಕನ್ನಡ ಸಂವೇದನೆಯ ಜೀವಾಳ. ಹಲವಾರು ಕತೆಗಳನ್ನು ಬರೆದವರು ಮಾತ್ರ ಮುಖ್ಯರಾಗುವುದಲ್ಲ. ಕೆಲವೇ ಕೆಲವು ಕತೆಗಳನ್ನು ಬರೆದವರೂ ಈ ಸಂವೇದನೆಯನ್ನು ಬೆಳೆಸಿದವರಾಗುತ್ತಾರೆ.

ವ್ಯಾಸರು ಕೇವಲ ಸಂಕೇತನಿಷ್ಠ ಕತೆಗಾರ ಅಲ್ಲ. ಸಂಕೇತದಲ್ಲಿ ತನ್ನದೇ ಆದ ಕಥನ ಮಾರ್ಗವನ್ನು ಬೆಳೆಸಿದವರು. ದುಃಖ ಎನ್ನುವುದು ಇಲ್ಲಿ ಸ್ಥಾಯೀಭಾವ. ಒಂದು ಹೂ, ಒಂದು ಕೀಟಕ್ಕೂ ಸುಖ ದುಃಖಗಳಿರುತ್ತವೆ ಎಂದು ತಿಳಿಯುವುದು. ಇದು ನಿರಂತರವಾದ ಪ್ರಕ್ರಿಯೆ. ವ್ಯಾಸರ ಸಾಹಿತ್ಯದಿಂದ ಉತ್ಪನ್ನವಾಗುವ ತಾತ್ವಿಕತೆ ಇದು.

ಇದಕ್ಕೊಂದು ಮಿತಿ ಇದೆ. ವ್ಯಾಸರ ಕತೆಗಳಲ್ಲಿ ಏರಿಳಿತಗಳು ಕಾಣಿಸುವುದಿಲ್ಲ. ಅವರ **rhythm**